ಕರ್ನಾಟಕ ವಿಧಾನಸಭೆ

ಮಂಗಳವಾರ 9ನೇ ಜುಲೈ 2002

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠವನ್ನು ಅಲಂಕರಿಸಿದರು.

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

(ಅ) ವಿಷಯ: ಮುಂಗಾರು ಮಳೆ ವಿಫಲದಿಂದಾಗಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಉಂಟಾಗಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಪ್ರಸಕ್ತ ವರ್ಷ ರಾಜ್ಯದಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮುಂಗಾರು ಮಳೆ ವಿಫಲವಾಗುತ್ತಿದೆ. ಕಳೆದ ವಾರ ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾಗಿರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೆವು. ಕಳೆದ ವರ್ಷವಂತೂ ರೈತರು ಬರಗಾಲದಿಂದ ತತ್ತರಿಸಿ ಹೋಗಿದ್ದರು. ಈ ವರ್ಷವಾದರೂ ರೈತರು ಬದುಕುತ್ತಾರೆಂದು ತಿಳಿದಿದ್ದೆವು. ಆದರೆ, ಪುನಃ ಬರಗಾಲದ ಛಾಯೆ ಮೂಡುತ್ತಿದ್ದು, ಮುಂಗಾರು ಮಳೆ ಕೈಕೊಡುತ್ತಿದೆ. ವಿಶೇಷವಾಗಿ ಸರ್ಕಾರದಿಂದ ರೈತರಿಗೆ ಬರಬೇಕಾದ ಬೆಳೆ ವಿಮೆ ಹಣ ಇವೊತ್ತಿಗೂ ಸಹ ಪಾವತಿಯಾಗಿಲ್ಲ. ಹೀಗಾಗಿ ರೈತರು ಒಂದರ ಮೇಲೊಂದು ಸಮಸ್ಯೆಗಳ ಸುಳಿಗೆ ಸಿಕ್ಕಿ ಸಂಕಷ್ಟದಲ್ಲಿದ್ದಾರೆ. ಆದಕಾರಣ, ಬರದ ಪರಿಸ್ಥಿತಿ, ಬೆಳೆ ವಿಮೆ ಹಣ ಸಂದಾಯ ಹಾಗೂ ರೈತರು ಎದುರಿಸುತ್ತಿರುವ ಇನ್ನಿತರ ಸಂಕಷ್ಟಗಳ ಬಗ್ಗೆ ಇವೊತ್ತು ಪ್ರಥಮ ಪ್ರಾಶಸ್ತ್ಯ ನೀಡಿ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದು, ಮಾನ್ಯ ಅಧ್ಯಕ್ಷರು ಈ ವಿಷಯ ಕುರಿತಂತೆ ;ಚರ್ಚೆಗೆ ಹೆಚ್ಚು ಕಾಲಾವಕಾಶ ನೀಡುವ ಮೂಲಕ ಅವಕಾಶ ಕಲ್ಪಿಸಿಕೊಡಬೇಕು. ರೈತರು ಬಹಳಷ್ಟು ತೊಂದರೆಯಲ್ಲಿರುವುದರಿಂದ ಇಂದು ಕೈಗೆತ್ತಿಕೊಳ್ಳಬೇಕೆಂದಿರುವ ಇತರ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಹಾಗೂ ಆ ಕುರಿತು ಪ್ರಸ್ತಾಪಿಸುವುದಕ್ಕೆ ತಾವು ದಯವಿಟ್ಟು ಅನುಮತಿ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

(ಅ) ವಿಷಯ: ಬೆಳೆ ವಿಮೆ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬರುವ ಹಣ ಸರಿಯಾಗಿ ವಿತರಣೆಯಾಗದಿರುವುದು.

ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕಳುಹಿಸಿರುವ ನಿಲುವಳಿ ಸೂಚನೆಯಂತೆಯೇ ನಮ್ಮ ಪಕ್ಷದ ವತಿಯಿಂದ ಮತ್ತೊಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಮುಖ್ಯವಾಗಿ ಬೆಳೆ ವಿಮೆ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬರುವ ಹಣವೇನಿದೆ, ಇದರ ವಿತರಣೆ ಸರಿಯಾಗಿ

ಆಗದಿರುವುದು ದುರ್ದೈವದ ವಿಚಾರ. ರೈತರ ಸಾಲ ವಸೂಲಾತಿ ಪ್ರಕ್ರಿಯೆಯನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ಕೈಗೊಳ್ಳುತ್ತಿದ್ದು, ಇದರಿಂದಾಗಿ ರೈತರು ಬಹಳ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಳೆದ ವರ್ಷ ರಾಜ್ಯದ ಅನೇಕ ಭಾಗಗಳಲ್ಲಿ ಮಳೆ ಸರಿಯಾಗಿ ಆಗದಿದ್ದುದರಿಂದ ರೈತರಿಗೆ ತೊಂದರೆಯಾಯಿತು. ಕೆಲವು ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಂಡು ಇದಕ್ಕಾಗಿ ಹಣ ಬಿಡುಗಡೆಯಾಗದಿರುವುದು ಹಾಗೂ ಇನ್ನಿತರ ಅನೇಕ ವಿಚಾರಗಳನ್ನು ನಾವು ಈ ಸಂದರ್ಭದಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಈ ವರ್ಷವೂ ರಾಜ್ಯದಲ್ಲಿ ಬರದ ಛಾಯೆಯನ್ನು ನೋಡುತ್ತಿರತಕ್ಕ ಸನ್ನಿವೇಶ ಉದ್ಭವವಾಗಿದೆ. ಇಂಥ ಸನ್ನಿವೇಶಗಳನ್ನು ಎದುರಿಸಲು ಸರ್ಕಾರ ಸೂಕ್ತ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಈ ನಿಟ್ಟಿನಲ್ಲಿ ಒತ್ತಡವನ್ನು ತರಬೇಕಾಗುತ್ತದೆ. ಮತ್ತು ಇದಕ್ಕೆ ಅಗತ್ಯವಾಗಿರುವ ಹಣವನ್ನು ಸಹ ಕೊಡಬೇಕಾಗುತ್ತದೆ. ಇವೆಲ್ಲಾ ದೃಷ್ಟಿಯಿಂದಾಗಿ ಇವೊತ್ತು ಅಭಾವದ ಪರಿಸ್ಥಿತಿ; ರೇಷ್ಮೆ ಕಬ್ಬು ಹಾಗೂ ತೆಂಗು ಬೆಳೆಗಾರರಾದ ರೈತರು ಬಹಳ ಕಷ್ಟದಲ್ಲಿರುವುದನ್ನು ಪ್ರಮುಖವಾಗಿ ಗಮನಿಸಿ ಬೆಳೆ ವಿಮೆ ಹಣವನ್ನು ತಕ್ಷಣ ಪಾವತಿಸಲು ಸರ್ಕಾರದ ಮೇಲೆ ಒತ್ತಾಯ ತರುವ ದೃಷ್ಟಿಯಿಂದ ನಿಲುವಳಿ ಸೂಚನೆಯನ್ನು ತಂದಿದ್ದು, ತಾವು ಈ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈ ವರ್ಷ ಬಂದಿರತಕ್ಕಂಥ ಬರಗಾಲದ ಪರಿಸ್ಥಿತಿ ಹಿಂದೆ ಎಂದೂ ಕೂಡ ಕೇಳಿರಲಿಲ್ಲ, ನಾವು ಯಾರೂ ನೋಡಿರಲಿಲ್ಲ. ರಾಜ್ಯದಲ್ಲಿ ಮೂರನೇ ಒಂದು ಭಾಗಕ್ಕೋ, ಕಾಲು ಭಾಗಕ್ಕೋ ವರ್ಷದಲ್ಲಿ ಎರಡು ಮೂರು ತಿಂಗಳು ಬರಗಾಲ ಬಂದಿರುತ್ತಿತ್ತು. ಬೇರೆ ಕಡೆ ಚೆನ್ನಾಗಿ ಬೆಳೆ ಬಂದಿರುತ್ತಿತ್ತು, ಹೇಗೋ ಅಡ್ಜೆಸ್ಟ್ ಆಗುತ್ತಿತ್ತು. ಆದರೆ ಈ ವರ್ಷ ಇಡೀ ರಾಜ್ಯದಲ್ಲಿ ಮಳೆ ಎಲ್ಲೂ ಇಲ್ಲ. ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಒಂದೂವರೆ ತಿಂಗಳ ಹಿಂದೆ ಎರಡು ಮಳೆ ಹದವಾಗಿ ಬಂತು. ಇದನ್ನು ನಂಬಿ ನಿರ್ಭಾಗ್ಯ ರೈತರು ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಬ್ಯಾಂಕ್‌ನಿಂದ, ಬ್ಯಾಂಕುಗಳಲ್ಲಿ ಒಡವೆಯನ್ನಿಟ್ಟು ತಂದರು.

ಅಧ್ಯಕ್ಷರು: ತಾವು ಡೀಟೈಲ್ಸ್‌ಗೆ ಹೋಗಬೇಡಿ. ಅದನ್ನು ಆಮೇಲೆ ಹೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಇರತಕ್ಕ ವಿಚಾರವನ್ನು ಹೇಳಬೇಕಲ್ಲಾ.

ಅಧ್ಯಕ್ಷರು: ಅದನ್ನು ಈಗ ಹೇಳುವುದಲ್ಲ. ನಾನು ಇದಕ್ಕೆ ಅಲೋ ಮಾಡಿದ ಮೇಲೆ ಹೇಳಿ. ಇದರ ಬಗ್ಗೆ ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳೋಣ. ಎಲ್ಲಾ ಪಕ್ಷದಿಂದ ಸುಮಾರು 70-80 ಜನ ಸದಸ್ಯರು ಇದರ ಬಗ್ಗೆ ಮಾತನಾಡಲು ಸೂಚನೆ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದ ಜೊತೆ ವಿಚಾರ ಮಾಡಿ ಹೇಳುತ್ತೇನೆ. ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ ಶ್ರೀ ಕೆ.ಹೆಚ್. ಹನುಮೇಗೌಡ ಇದನ್ನು ನಾವು ಸರ್ಕಾರದ ಗಮನಕ್ಕೆ ತರುವುದು ಬೇಡವೇ?

ಅಧ್ಯಕ್ಷರು: ಈಗಲ್ಲ ಈಗ ಆ ವಿಚಾರವನ್ನು ರೈಸ್ ಮಾಡಬೇಕು, ಅಷ್ಟನ್ನು ಮಾಡಿ. ನಾಟ್ ಇನ್‌ಡೀಟೈಲ್.

ಶ್ರೀ ಕೆ.ಹೆಚ್. ಹನುಮೇಗೌಡ : ಇದು ನಾಲ್ಕು ಕೋಟಿ ಜನರ ಅಳಿವು ಉಳಿವಿನ ಪ್ರಶ್ನೆ ಪ್ರಶ್ನೋತ್ತರಗಳನ್ನು ಒಂದು ಗಂಟೆ ಲೇಟ್ ಆಗಿ ತೆಗೆದುಕೊಂಡರೆ ಪ್ರಪಂಚವೇನೂ ಮುಳುಗಿಹೋಗುವುದಿಲ್ಲ. ಇದು ಪ್ರಮುಖವಾದ ಪ್ರಶ್ನೆ. ಇದರ ಬಗ್ಗೆ ಮೊದಲು ಚರ್ಚೆಯಾಗಬೇಕು. ರೈತರಿಗೆ ಏನಾದರು ಒಂದು ಸಹಾಯ ದೊರೆಯಬೇಕಲ್ಲವೆ?

ಅಧ್ಯಕ್ಷರು: ತಾವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ, ನಾನು ಸರ್ಕಾರವನ್ನು ಕನ್‌ಸಲ್ಟ್ ಮಾಡಬೇಕಲ್ಲವೆ? Give me half an hour time. I will see that it is taken up ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಹೆಚ್. ಹನುಮೇಗೌಡ: ಇದಕ್ಕೆ ಆಮೇಲೆ ಸಮಯ ಕೊಡುತ್ತೀರಾ?

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದಮೇಲೆ ಕೊಡುತ್ತೇನೆ.

ಶ್ರೀ ಹೆಚ್. ಜಗದೀಶ್‌ಶೆಟ್ಟರ್: ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿಯಾದರೂ ಇದನ್ನು ತೆಗೆದುಕೊಳ್ಳಬೇಕು. ಇದು ಬಹಳ ಪ್ರಮುಖವಾದ ವಿಚಾರ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಲ್ಯಾಪ್ಸ್ ಆಗುವುದನ್ನು ಐ ಡೋಂಟ್ ಲೈಕ್. ತಮ್ಮ ಸದಸ್ಯರಿಗೇ ತೊಂದರೆಯಾಗುತ್ತದೆ.

ಶ್ರೀ ಹೆಚ್. ಜಗದೀಶ್‌ಶೆಟ್ಟರ್: ಇದು ಬಹಳ ಪ್ರಮುಖವಾದ ವಿಚಾರ. ಬಹಳ ಸಮಯ ಬೇಕಾಗುತ್ತದೆ.

ಅಧ್ಯಕ್ಷರು: ಇವತ್ತು ಕ್ವೊಶ್ಚನ್‌ಗೆ ಬಹಳ ಕಡಿಮೆ ಸಮಯ ಸಾಕು ಏಕೆಂದರೆ ಇವತ್ತು ಬಹಳ ಕಡಿಮೆ ಪ್ರಶ್ನೆಗಳಿಗೆ ಉತ್ತರ ಬಂದಿದೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಗಂಭೀರವಾದ ವಿಚಾರವಿರುವಾಗ, ಸರ್ಕಾರದವರೂ ಇದನ್ನು ಮೊದಲು ತೆಗೆದುಕೊಳ್ಳೋಣ, ಪ್ರಶ್ನೋತ್ತರ ಅನಂತರ ತೆಗೆದುಕೊಳ್ಳೋಣ ಎಂಬುದಕ್ಕೆ ಒಪ್ಪಿಕೊಂಡು ಬಿಡಬಹುದು.

ಅಧ್ಯಕ್ಷರು: ಪ್ರಶ್ನೆಗಳನ್ನು ಕೇಳಿರುವ ಸದಸ್ಯರಿಗೆ ಅನಾನುಕೂಲವಾಗುತ್ತದಲ್ಲಾ, ಬಹಳ ಮುಖ್ಯವಾದ ಪ್ರಶ್ನೆಗಳನ್ನು ಕೇಳಿದ್ದಾರಲ್ಲಾ. ಪ್ರಶ್ನೆ ಕೇಳಿರುವ ಸದಸ್ಯರ ಕಾದಿದ್ದಾರೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಬರದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲೇಬೇಕಾಗಿರುವುದರಿಂದ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಚರ್ಚೆ ಮಾಡಲು ನಾವೆಲ್ಲಾ ಸಿದ್ಧರಿದ್ದೇವೆ. ಇದು ನಮ್ಮ ಪಕ್ಷದ ನಿಲುವು ಕೂಡ ಆಗಿದೆ. ನಮ್ಮ ಆಗ್ರಹವೂ ಇದೆ. ಸರ್ಕಾರಕ್ಕೂ ಬರದ ಪರಿಸ್ಥಿತಿಯ ಬಗ್ಗೆ ಅರಿವಿರುವುದರಿಂದ ಅವರೂ ಒಪ್ಪಬಹುದು. ಅವರೂ ಒಪ್ಪುವ ಬಗ್ಗೆ ತಾವೂ ಮನವೊಲಿಸುವ ಪ್ರಯತ್ನ ಮಾಡಿ, ಪ್ರಶ್ನೋತ್ತರವನ್ನು ಬದಿಗಿಟ್ಟು ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು.

ಕೆ. ವಿಜಯ ಕುಮಾರ್ ಶೆಟ್ಟಿ: ಪ್ರಶ್ನೋತ್ತರ ವೇಳೆ ಅತ್ಯಂತ ಪ್ರಾಮುಖ್ಯವಾದದ್ದು. ಇದಕ್ಕೆ ಪ್ರಾರಂಭದಲ್ಲಿ ಅವಕಾಶ ಕೊಡಬೇಕು. ಅನಂತರ ಬೇರೆ ವಿಚಾರವನ್ನು ಮುಂದುವರೆಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ವಿಚಾರದ ಗಂಭೀರತೆಯನ್ನು ಕಡಿಮೆ ಮಾಡಬೇಕು ಎನ್ನತಕ್ಕ ದೃಷ್ಟಿ ಸರ್ಕಾರದ್ದೂ ಅಲ್ಲ, ವಿರೋಧ ಪಕ್ಷದವರಿಗಿರುವ ಕಳಕಳಿಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ತಾವು ಆಗಲೇ ಅಪ್ಪಣೆ ಕೊಡಿಸಿದ್ದೀರಿ, ಪ್ರಶ್ನೋತ್ತರ ವೇಳೆ ಆದಮೇಲೆ ಇದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ಹನುಮೇಗೌಡ: ಪ್ರಶ್ನೋತ್ತರ ವೇಳೆ ಆದಮೇಲೆ ಇದರ ಬಗ್ಗೆ ಚರ್ಚೆಗೆ ಹೆಚ್ಚು ಕಾಲವನ್ನು ಕೊಡಬೇಕು, ಇರತಕ್ಕ ವಿಚಾರಗಳನ್ನು ಎಲ್ಲಾ ಶಾಸಕರು ಸರ್ಕಾರದ ಗಮನಕ್ಕೆ ತರಬೇಕು. ಹತ್ತು ನಿಮಿಷನೋ ಹದಿನೈದು ನಿಮಿಷನೋ ಕೊಟ್ಟು ಬಿಲ್ಲನ್ನು ಹೊಡೆದುಬಿಟ್ಟರೆ ನಮಗೆ ಇಲ್ಲಿ ಇರಲು ಕಷ್ಟವಾಗುತ್ತದೆ, ಊರಿಗೆ ಹೋಗಲೂ ಕಷ್ಟವಾಗುತ್ತದೆ. ಸಾಕಷ್ಟು ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ದಯವಿಟ್ಟು ಇಲ್ಲಿ ಕೇಳಿ ಗೌಡರೆ, ತಾವು ಹೆಚ್ಚು ಕಾಲವೆನ್ನುವುದರ ಬಗ್ಗೆ ಅನಂತರ ಕೇಳಿ. We will take up after question hour.

ಶ್ರೀ ಕೆ. ಹೆಚ್. ಹನುಮೇಗೌಡ: ಸಾಕಷ್ಟು ಕಾಲಾವಕಾಶವನ್ನು ಕೊಟ್ಟರೆ ಆಗಬಹುದು.

ಅಧ್ಯಕ್ಷರು: ಇನ್ನೂ ಅದರ ಬಗ್ಗೆ ನಾನು ಹೇಳಿಯೇ ಇಲ್ಲ, ಆಗಲೇ ತಾವು ಹೇಳಿದರೆ ಹೇಗೆ? ಈಗ ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು.

ಮೈಸೂರು ನಗರಕ್ಕೆ ವಿದ್ಯುಚ್ಛಕ್ತಿ ನೀಡಿಕೆ

1(54) - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ನಗರದಲ್ಲಿ ಯಾವ ಯಾವ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ?

2) ಮೈಸೂರು ನಗರಕ್ಕೆ ಹಾಲಿ ಎಷ್ಟು ಪ್ರಮಾಣದ ವಿದ್ಯುತ್ ಅವಶ್ಯಕತೆ ಇದೆ?